# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 75,
15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

ಸಂಖ್ಯೆ: ವಾ-75/ವಾ.ಸ./ಸಭಾನಡವಳಿ-19/2021-22 ದಿನಾಂಕ: 17/01/2022

-:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 04/01/2022 ಮಂಗಳವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್-75 ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ವೆಂಕಟೇಶ್ ಆರ್. ವಾರ್ಡ್ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಭಂಧಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಶ್ರೀ ವೆಂಕಟೇಶ್ ಆರ್. ರವರು ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದವರು:-**

| | |
|---|---|
| 1 | ಶ್ರೀ. ಎಲ್. ಸುರೇಶ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-75, ಬಿಬಿಎಂಪಿ |
| 2 | ಶ್ರೀ ವೆಂಕಟೇಶ್ ಆರ್. ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-75, ಬಿಬಿಎಂಪಿ |
| 3 | ಶ್ರೀ ಕೆ.ವಿ.ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ವಾರ್ಡ್-75, ಬಿಬಿಎಂಪಿ. |
| 4 | ಶ್ರೀಮತಿ ಲತಾ ಟಿ.ಎಸ್. ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ. |
| 5 | ಶ್ರೀ ಸುನೀಲ್ ಕುಮಾರ್, ಕಂದಾಯ ಪರಿವೀಕ್ಷಕರು, ವಾರ್ಡ್-75, ಶಂಕರಮಠ, ಬಿಬಿಎಂಪಿ. |
| 6 | ಶ್ರೀ ಸಿದ್ದರಾಮೇಶ್ವರ್, ಕಂದಾಯ ಪರಿವೀಕ್ಷಕರು, ವಾರ್ಡ್-75, ಶಂಕರಮಠ, ಬಿಬಿಎಂಪಿ. |
| 7 | ಶ್ರೀ ಛಾಯಾಪತಿ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-75. |
| 8 | ಶ್ರೀ ಚನ್ನವೀರಯ್ಯ, ಹೆಡ್ ಗ್ಯಾಂಗ್‌ಮನ್, ಕಾಮಗಾರಿ ವಿಭಾಗ, ವಾರ್ಡ್-75, ಬಿಬಿಎಂಪಿ. |
| 9 | ಶ್ರೀ ಎನ್. ಮಂಜುನಾಥ್, ಮೇಸ್ತ್ರಿ, ತೋಟಗಾರಿಕೆ ವಿಭಾಗ, ವಾರ್ಡ್-75, ಬಿಬಿಎಂಪಿ. |
| 10 | ಶ್ರೀ ಗಿರೀಶ್ ಬಿ, ಕಾಮಗಾರಿ ಪರಿವೀಕ್ಷಕರು, ಎನ್.ಡಬ್ಲ್ಯು-1 ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 11 | ಶ್ರೀ ರಮೇಶ್, ಮೇಸ್ತ್ರಿ, ಘ.ತ್ಯಾ.ನಿ. ವಿಭಾಗ, ವಾರ್ಡ್-75, ಬಿಬಿಎಂಪಿ. |
| 12 | ಶ್ರೀ ದಿಲೀಪ್‌ಕುಮಾರ್, ವಾರ್ಡ್ ಮಾರ್ಷಲ್, ವಾರ್ಡ್-75, ಬಿಬಿಎಂಪಿ. |
| 13 | ಶ್ರೀ ಕೇಶವಮೂರ್ತಿ, ಎಎಸ್‌ಐ, ಬಸವೇಶ್ವರನಗರ ಪೊಲೀಸ್ ಠಾಣೆ. |
| 14 | ಶ್ರೀ ಪ್ರವೀಣ, ಪಿ.ಸಿ.18783, ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 15 | ಶ್ರೀ ಅಬ್ದುಲ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ವಾರ್ಡ್-75 |
| 16 | ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 17 | ಶ್ರೀ ಸಂಜಯ್ ಜೆ. ವಾರ್ಡ್‌ನ ನಾಗರೀಕರು, ವಾರ್ಡ್-75. |
| 18 | ಶ್ರೀ ಗಣೇಶ್, ವಾರ್ಡ್‌ನ ನಾಗರೀಕರು, ವಾರ್ಡ್-75. |

ಮು.ತಿ.ನೋ.

Scanned by CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1. **ಆರೋಗ್ಯ ಇಲಾಖೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

   - ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-75 ಶಂಕರಮಠದಲ್ಲಿ ಕೋವಿಡ್-19 ಹಾಗೂ ಓಮಿಕ್ರಾನ್‌ಗೆ ಸಂಬಂಧಿಸಿದಂತೆ ಮಾಹಿತಿಗಳು ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
   - ಕಾರ್ಯದರ್ಶಿರವರು ಮಾತನಾಡುತ್ತಾ, ಶ್ರೀ ಎಸ್. ಲೋಕೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು ರವರನ್ನು ರೈಲ್ವೇ ನಿಲ್ದಾಣದಲ್ಲಿ ಬೆಂಗಳೂರು ನಗರಕ್ಕೆ ಹೊರಗಿನಿಂದ ಬರುವ ಸಾರ್ವಜನಿಕರಿಗೆ ಕೋವಿಡ್-19 ಪರೀಕ್ಷೆ ಕೈಗೊಳ್ಳಲು ಕರ್ತವ್ಯಕ್ಕೆ ನಿಯೋಜಿಸಿರುವುದರಿಂದ ಇಂದಿನ ಸಭೆಗೆ ಹಾಜರಾಗಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
   - ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ನಗರದಲ್ಲಿ ದಿನೇ ದಿನೇ ಕೋವಿಡ್-19 ಸಾಂಕ್ರಾಮಿಕ ರೋಗದ ಸೋಂಕಿತರ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರು ಹೆಚ್ಚಾಗಿ ಗುಂಪು ಕಟ್ಟುವ ಸ್ಥಳಗಳಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಎಚ್ಚರಿಸುವುದು. ಹಾಗೂ ಮಾಸ್ಕ್ ಧರಿಸದೇ ಸಂಚರಿಸುವವರಿಗೆ ದಂಡ ವಿಧಿಸಲು ಮಾರ್ಷಲ್‌ಗಳು ಕ್ರಮವಹಿಸುವುದು ಹಾಗೂ ವ್ಯಾಕ್ಸಿನೇಷನ್ ಪಡೆದುಕೊಳ್ಳುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಂಬಂಧಿಸಿದ ಆರೋಗ್ಯ ಇಲಾಖೆಯ ಅಧಿಕಾರಿಗಳು ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

2. **ಅಭಿಯಂತರರ ವಿಭಾಗದ ಬಗ್ಗೆ:-**

   - ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ. ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗುಂಡಿಗಳನ್ನು ಸರಿಪಡಿಸುವುದು ಕೆಲಸವನ್ನು ಶೀಘ್ರವಾಗಿ ಕೈಗೊಳ್ಳಬೇಕಾಗಿ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ಹೇಳಿದರು.
   - ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಸರಿಪಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು ಮುಂದಿನ ದಿನಗಳಲ್ಲಿ ಉಳಿದ ಗುಂಡಿಗಳನ್ನು ಸರಿಪಡಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

3. **ವಿದ್ಯುತ್ ವಿಭಾಗದ ಬಗ್ಗೆ:-**

   - ಶ್ರೀ ಸಂಜಯ್ ಕುಮಾರ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, 15ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳನ್ನು ಸರಿಯಾಗಿ ಸ್ವಿಚ್ ಆಫ್ ಮಾಡುತ್ತಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ರಸ್ತೆಯ ಬಿದಿ ದೀಪಗಳಿಗೆ ಅಳವಡಿಸಲಾದ ಟೈಮರ್ ಅನ್ನು ಸರಿಪಡಿಲು ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಅಬ್ದುಲ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ರವರಿಗೆ ಸಭೆಯಲ್ಲಿ ತಿಳಿಸಿದರು.
   - ಶ್ರೀ ಸಿದ್ಧರಾಜು ಸೋಸಲೆ ಹಾಗೂ ಶ್ರೀ ಸಂಜಯ್‌ಕುಮಾರ್ ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಕೆಲವು ರಸ್ತೆಗಳಲ್ಲಿನ ಬೀದಿ ದೀಪಗಳು ಹಾಗೂ ಉದ್ಯಾನವನಗಳಲ್ಲಿ ಅಳವಡಿಸಲಾದ ವಿದ್ಯುತ್ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲವೆಂದು ಸಭೆಯಲ್ಲಿ ದೂರು ನೀಡಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಎಲ್ಲಾ ರಸ್ತೆಗಳ ಬೀದಿ ದೀಪಗಳ ಸರ್ವೆಯನ್ನು ನಡೆಸಿ ಹಾಗೂ ದೂರುಗಳು ಬಂದಿರುವ ವಿದ್ಯುತ್ ದೀಪಗಳನ್ನು ಸರಿಪಡಿಸಿ ಸರಿಯಾಗಿ ನಿರ್ವಹಣೆಯನ್ನು ನಿರ್ವಹಿಸುವಂತೆ ಮತ್ತು ದೂರುಗಳನ್ನು ಸರಿಪಡಿಸಿರುವ ಬಗ್ಗೆ ಮುಂದಿನ ಸಭೆಯಲ್ಲಿ ವಿವರಿಸುವಂತೆ ತಿಳಿಸಿದರು.

4. **ಪಶುಪಾಲನೆ ವಿಭಾಗದ ಬಗ್ಗೆ:-**

   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತದೆ, ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned by CamScanner

5. <u>ಕಂದಾಯ ವಿಭಾಗದ ಬಗ್ಗೆ:-</u>

- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಎಂದಿನಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾದ ಕಂದಾಯದ ಮೊತ್ತ ಹಾಗೂ ಕಂದಾಯ ಸಂಗ್ರಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡುವಂತೆ ಕಂದಾಯ ಪರಿವೀಕ್ಷಕರು ವಾರ್ಡ್-75 ರವರಿಗೆ ತಿಳಿಸಿದರು.
- ಶ್ರೀ ಸುನೀಲ್ ಕುಮಾರ್, ಮತ್ತು ಶ್ರೀ ಸಿದ್ಧರಾಮೇಶ್ವರ್ ಕಂದಾಯ ಪರಿವೀಕ್ಷಕರು, ವಾಡ್-75 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಕಂದಾಯ ಸಂಗ್ರಹಣೆಯಾಗುತ್ತಿದ್ದು, 01-ಏಪ್ರಿಲ್-2021 ರಿಂದ 04-ಜನವರಿ-2022ರ ವರೆಗೆ ಬಾಕಿ ಹಾಗೂ ಪ್ರಸ್ತುತ ಸಾಲಿನ ಒಟ್ಟು ಮೊತ್ತ ರೂ.5.01 ಕೋಟಿಗಳಷ್ಟು ಕಂದಾಯ ಸಂಗ್ರಹವಾಗಿರುವುದಾಗಿ ತಿಳಿಸುತ್ತಾ, ಕಂದಾಯದ ವಿವರಗಳನ್ನು ಸಭೆಯಲ್ಲಿ ಸಲ್ಲಿಸಿದರು.

6. <u>**ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-**</u>

- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಬ್ಲಾಕ್ ಸ್ಪಾಟ್‌ಗಳಲ್ಲಿ ಗಸ್ತು ತಿರುಗಿ ಕಸ ಹಾಕುವುದು ಕಂಡುಬಂದಲ್ಲಿ ಸ್ಥಳದಲ್ಲಿ ಮಾರ್ಷಲ್‌ರವರಿಂದ ದಂಡ ವಿಧಿಸುವುದು ಹಾಗೂ ಕಸ ವಿಲೇವಾರಿ ಮತ್ತು ಸಂಗ್ರಹಣೆಯಲ್ಲಿ ಯಾವುದೇ ದೂರುಗಳು ಬಾರದಂತೆ ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀರಮೇಶ್, ಮೇಸ್ತ್ರಿ, ವಾರ್ಡ್-75 ರವರಿಗೆ ತಿಳಿಸಿದರು.

7. <u>**ತೋಟಗಾರಿಕೆ ವಿಭಾಗದ ಬಗ್ಗೆ:-**</u>

- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ಯಾನವನಗಳಲ್ಲಿ ಯಾವುದೇ ದೂರುಗಳು ಬಾರದಂತೆ ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್, ಮೇಸ್ತ್ರಿ, ತೋಟಗಾರಿಕೆ ಇಲಾಖೆ ರವರಿಗೆ ಸಭೆಯಲ್ಲಿ ತಿಳಿಸಿದರು.

8. <u>ಬೆಸ್ಕಾಂ ವಿಭಾಗದ ಬಗ್ಗೆ:-</u>

- ಶ್ರೀ ಗಣೇಶ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಆಗಾಗ್ಗೆ ಪದೇ ಪದೇ ವಿದ್ಯುತ್ ಹೋಗುತ್ತಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.
- ಶ್ರೀಮತಿ ಲತಾ, ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ ರವರು ಮಾತನಾಡುತ್ತಾ, ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

9. <u>**ಪೊಲೀಸ್ ವಿಭಾಗದ ಬಗ್ಗೆ:-**</u>

- ಶ್ರೀ ಸಂಜಯ್ ಜೆ., ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಅರವಿಂದೋ ವಿದ್ಯಾ ಮಂದಿರ ಹತ್ತಿರದ ಗಣೇಶ ದೇವಸ್ಥಾನದ ಬಳಿಯಿರುವ ಡೆಡ್ ಎಂಡ್ ರಸ್ತೆಯಲ್ಲಿ ಹುಡುಗರು ಕುಡಿದು ಗಲಾಟೆ ಮಾಡುವುದಾಗಿ ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಸದರಿ ದೂರಿನ ಬಗ್ಗೆ ಸೂಕ್ತ ಕ್ರಮವಹಿಸುವುದು ಹಾಗೂ ಇಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಾಗಿ ಗಸ್ತು ತಿರುಗಲು ಕ್ರಮ ತೆಗೆದುಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಪೊಲೀಸರಿಗೆ ತಿಳಿಸಿದರು.

ಮುಂದುವರೆದು, ಪ್ರತೀ ಸಭೆಯ ಸಭಾ ನಡವಳಿಗಳನ್ನು ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿ ರವರಿಗೆ ಸೂಚಿಸಿದರು. ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾ ನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು, ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಟಿಪ್ಪಣಿಯೊಂದಿಗೆ ದಾಖಲಾತಿಗಳನ್ನು ದೃಢೀಕರಿಸಿ ಕಡತದಲ್ಲಿ ತಪ್ಪದೇ **ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ** ವರದಿ ಮಾಡಲು ಹಾಗೂ **ವಾರ್ಡ್ ಕಮಿಟಿ ವಾರ್ಡ್-75 ವಾಟ್ಸ್ ಆಪ್ ಗ್ರೂಪ್** ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ನೋಡಲ್ ಅಧಿಕಾರಿರವರ ಅನುಮೋದನೆ ಮೇರೆಗೆ )

17/01/2022.
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 75

ಮು.ತಿ.ನೋ.

Scanned by CamScanner